ಶಿವಮೊಗ್ಗ ಡಿಸ್ಟ್ರಿಕ್ಟು.

ತಾರೀಖು ನೆ ಜುಲೈ 1907.

ಸ॥ 1907ನೆ ಇಸವಿ ಜುಲೈ ತಾರೀಖು 6ನೆ ಮಕ್ರುಂನ ಬಾಬತ್ತು ಅಬ್‌ಸ್ಟ್ರಾಕ್ಟು ನೋಟಿಫಿಕೇಷನ್.

ಈ ಮಾರ್ಜೆನ್ನಲ್ಲಿ ನಮೂದು ಮಾಡಿರುವ ಇನಾಂ ಗ್ರಾಮಗಳು ಕಂದಾಯ ಬಾಕೀಗೋಸ್ಕರ ಅದರ ಬಾಜೂದಲ್ಲಿ ನೋಟು ಮಾಡಿರುವ ತಾರೀಖುಗಳಲ್ಲಿ ಶಿವಮೊಗ್ಗಾ ತಾಲ್ಲೂಕು ಕಚೇರಿ ಬಳಿ ಹರಾಜು ಮಾಡಲ್ಪಡುವವೆ.

1. ಊರಗಡೂರು	... 15—8—07.	6. ಆನೆಹಳ್ಳಿ	... 16—8—07.
2. ತಾರೇಕಟ್ಟ	.. ಡಿಟೋ.	7. ತಟ್ಟಕೆರೆ	... 17—8—07.
3. ಕುನ್ನೂರು	... ಡಿಟೋ.	8. ಗಾಜನೂರು	... ಡಿಟೋ
4. ಮತ್ತೂರು	... 16—8—07.	9. ಕುಡಗಲಮನೆ	... ಡಿಟೋ
5. ಹೊಸಹಳ್ಳಿ	.. ಡಿಟೋ.	10. ಭಂಡಾರಹಳ್ಳಿ	... 19—8—07.

ಈ ತಪಸೀಲು ತಿಳಿಯುವ ಬಗ್ಗೆ 1907ನೆ ಇಸವಿ ಜುಲೈ ತಾರೀಖು 18ನೆ ಮಕ್ರುಂನ ಮೈಸೂರು ಗೆಜೆಟ್ಟು IIನೆ ಭಾಗದ ನಂ. 336, 337, 338, 339, 340, 341, 342, 343, 344, 345ನೆ ಪೇಜುಗಳಲ್ಲಿ ನೋಡಬೇಕು.

II

ಸ್ಥಿರಸ್ವತ್ತಿನ ಹರಾಜ್ ಬಗ್ಗೆ ಕೊಡಲ್ಪಟ್ಟ ಇಸ್ತಿಹಾರ್ ವ ಪ್ರಸಿದ್ಧಪತ್ರಿಕೆ.

ತಾರೀಖು 24ನೆ ಜುಲೈ 1907.

1. ಕಂದಾಯದ ಬಾಕೀದಾರರಾದ ಸೂಳೇಕೆರೆ ಗ್ರಾಮದ ಮೆ॥ ಕೆ. ಶ್ಯಾಮೈಯ್ಯಂಗಾರ್ಯರವರಿಂದ ಬರಬೇಕಾದ ಜಮ್ಮಾ ಕಂದಾಯದ ಬಾಕೀಗಾಗಿ ಇದರಡಿ ನಮೂದಾಗುವ ಸ್ಥಿರಸ್ವತ್ತು ಶಿವಮೊಗ್ಗಾ ಡಿಸ್ಟ್ರಿಕ್ಟು ಚನ್ನಗಿರಿ ತಾಲ್ಲೂಕು ಸೂಳಿಕೆರೆ ಗ್ರಾಮದಲ್ಲಿ 1907ನೆ ಇಸವಿ ಸೆಪ್ಟಂಬರ್ 14ನೆ ತಾರೀಖಿನಲ್ಲಿ ಬಹಿರಂಗವಾದ ಹರಾಜು ಮಾಡಲ್ಪಡುತ್ತೆಂದು ಇದರಿಂದ ಪ್ರಸಿದ್ಧ ಪಡಿಸಲ್ಪಟ್ಟಿವೆ.

ಹರಾಜು ಹಗಲು 11 ಘಂಟೆಗೆ ಉಪಕ್ರಮಿಸಲ್ಪಡುತ್ತೆ. ಸ್ವತ್ತು ಏಕದಂ ಜಡದರಖಾಸ್ತುದಾರನ ಪೆಸರಿಗೆ ನಿಲ್ಲಿಸಲ್ಪಡುತ್ತೆ. ಶಿವಮೊಗ್ಗಾ ಸಬ್ ಡಿವಿಜ್ ಅಸಿಸ್ಟೆಂಟ್ ಕಮಿಷನರ್ ಸಾಹೇಬರವರು ರೂಬರೂ ಹರಾಜು ನಡಿಸಲ್ಪಡುತ್ತೆ.

2. ಸದರೀ ಸ್ವತ್ತಿಗಾಗಿ ಹರಾಜುದಾರನು 1907ನೆ ಸಾಲಿಗೆ ಪೂರ್ತಿಯಾಗಿ ಪಾವತಿ ಮಾಡಬೇಕಾದ್ದ ಕಂದಾಯದ ಮೊಬಲಗು ಇದರಡಿ ಕಾಣಿಸಿರುವ ತಖ್ತೆಯಲ್ಲಿ ನಮೂದಿಸಿರುವ ತಖ್ಮೀಲ್ ಮೇರಿಗೆ ರೂಪಾಯಿ 3,740—11—5 ಆಗಿರುತ್ತೆ.

3. ಹರಾಜು ಕಾಲದಲ್ಲಿ ಹರಾಜುದಾರನು ಹರಾಜ್ ಮೊಬಲಗಿನ ಶೇಕಡಾ 25 ರೂಪಾಯಿಗಳನ್ನು ಡಿಪಾಜಿಟ್ಟು ಹಾಜರ್ಮಾಡಬೇಕಾಗಿರುತ್ತೆ. ಅದು ಜಾತಾ ಹರಾಜು ಬಾಬತು ಬಾಕಿ ಮೊಬಲಗು ಹರಾಜು ತಾರೀಖು ಲಾಗಾಯತು 15 ದಿವಸಗಳಲ್ಲಿ ಪಾವತಿ ಮಾಡಲ್ಪಡದೇ ಹೋದಲ್ಲಿ ಮೇಲೆ ಹೇಳಿದ ಡಿಪಾಜಿಟ್ಟು ಮೊಬಲಗನ್ನು ಹಾಜರ್ಮಾಡಿದವನು ಕಳದುಕೊಳ್ಳಲು ಗುರಿಯಾಗುತ್ತಾನೆ.

4. ಅಂಥಾ ಡಿಪಾಜಿಟ್ಟು ಮೊಬಲಗು ಹಾಜರ್ಮಾಡಲ್ಪಡದೆ ಯಾ ಹರಾಜು ಬಾಬತು ಬಾಕೀ ಮೊಬಲಗು ಪಾವತಿ ಮಾಡಲ್ಪಡದೆ ಹೋದಾಗ್ಯೆ ಸದರೀ ಸ್ವತ್ತು ಮೊದಲು ಹರಾಜುದಾರನ ಖರ್ಚಿನಿಂದಲೂ ಮತ್ತು ಅವನಿಗೆ ಅದರಿಂದ ಉಂಟಾಗಬಹುದಾದ ನಷ್ಟಕ್ಕೆ ಗುರಿಪಡಿಸಿಯೂ ಪುನಃ ಹರಾಜು ಮಾಡಲ್ಪಡುತ್ತೆ.

5. ಹರಾಜಿನಲ್ಲಿ ಸ್ವತ್ತು ಯಾರ ಹೆಸರಿಗಾದರೂ ನಿಲ್ಲಿಸಲ್ಪಡುವದಕ್ಕೆ ಮುಂಚಿತವಾಗಿ, ಬಾಕೀದಾರನಾಗಲಿ ಆತನ ತರಫಿನವನಾಗಿ ಪ್ರವರ್ತಿಸುವ ಯಾ ಸದರೀ ಸ್ವತ್ತಿನಲ್ಲಿ ಬಾಧ್ಯತೆ ಇರುತ್ತೆಂದು ಹೇಳುವ ಯಾವ ಇತರ ಮನುಷ್ಯನೇ ಆಗಲಿ ಬಾಕಿಯಲ್ಲಿ ಬಂದಿರುವ ಪೂರಾ ಕಂದಾಯದ ಹಣವನ್ನೂ, ಬಡ್ಡಿ ಮತ್ತು ಇತರ ಖರ್ಚುಗಳ ಸಮೇತ ಹಾಜರ್ಮಾಡುವ ಪಕ್ಷಕ್ಕೆ ಹರಾಜು ನಿಲ್ಲಿಸಲ್ಪಡುತ್ತೆ.

6. ಹರಾಜು ಡೆಪ್ಯುಟಿ ಕಮ್ಮಿಷನರವರಿಂದಾಗಲಿ ಯಾ ಈ ಭಾಗದಲ್ಲಿ ಅಧಿಕಾರವನ್ನು ಹೊಂದಿದ ಇತರ ಅಧಿಕಾರಿಯಿಂದಾಗಲಿ ಮಂಜೂರ್ಮಾಡಲ್ಪಡುವ ತನಕ ಸ್ವತ್ತಿನ ಹರಾಜು ಪೂರ್ತಿಯಾಗುವದಿಲ್ಲ.

7. ಹರಾಜಿನಲ್ಲಿ ತೆಗದುಕೊಂಡವರು ಹರಾಜ್ ಮೊಬಲಗನ್ನು ಪೂರ್ತಿಯಾಗಿ ಪಾವತಿ ಮಾಡಿದಮೇಲೆ ಡೆಪ್ಯುಟಿ ಕಮ್ಮಿಷನರ ಹರಾಜು ಮಂಜೂರ್ಮಾಡಲ್ಪಟ್ಟು ಕೂಡ್ಲೆ ಹರಾಜುದಾರು ಸದರೀ ಸ್ವತ್ತಿನ ಸ್ವಾಧೀನವನ್ನು ಹೊಂದುವರು. ಮತ್ತು ಸದರೀ ಹರಾಜುದಾರನ ಹೆಸರಿನಲ್ಲಿ ರಿಜಿಸ್ಟರ ಮಾಡಲ್ಪಟ್ಟು ಡೆಪ್ಯುಟಿ ಕಮ್ಮಿಷನರವರಿಂದ ಸೈಟ್ ಪೊಹರ್ ಮಾಡಲ್ಪಟ್ಟ ಬಂದು ಹಕ್ಕಿಕೇಟ್ ಆತನಿಗೆ ಕೊಡಲ್ಪಡುವದು. ಸ್ವತ್ತಿನ ವಿವರಣೆಯಲ್ಲಿಯೂ ಯಾ ವಿಸ್ತೀರ್ಣದಲ್ಲಿಯೂ ಇರುವ ಸ್ಖಾಲಿತ್ಯಗಳಿಗೆ ಮೆಂಟನವರು ಜವಾಬ್ದಾರರಲ್ಲವೆಂಬ ಅಂಶವನ್ನು ಸ್ಪಷ್ಟವಾಗಿ ತಿಳಿದಿರತಕ್ಕದ್ದು.

ಹರಾಜಿನಿಂದ ತಮಗೆ ನಷ್ಟ ಉಂಟಾಯಿತೆಂದು ಎಣಿಸುವ ಜನಗಳು ಹರಾಜ್ ತಾರೀಖು ಲಾಗಾಯತು 30 ದಿವಸಗಳೊಳಗೆ ಕಮ್ಮಿಷನರವರಿಗೆ ಅಪ್ಪೀಲ್ ಮಾಡಿಕೊಳ್ಳುವದಕ್ಕೂ ಮತ್ತು ಅವರ ಹುಕುಮಿನಮೇಲೆ ಕಾನೂನಿನಿಂದ ವಿಧಿಸಲ್ಪಟ್ಟಿರುವ ಮೇರೆಗೆ ಮೇಲ್ವಿಚಾರಣೆ ಅಧಿಕಾರಿಗಳಿಗೆ ಅಪ್ಪೀಲ್ ಮಾಡಿಕೊಳ್ಳುವದಕ್ಕೂ ಸ್ವತಂತ್ರರಾಗಿರುತ್ತಾರೆ. ಸ್ವತ್ತಿನ ವಿಕ್ರಯವು ಅಂಥಾ ಅಪ್ಪೀಲಿನಲ್ಲಿ ಆಗುವ ಫೈಲ್ ಹುಕುಮಿಗೆ ಬದ್ಧವಾಗಿರತಕ್ಕದ್ದು.

2 B

9. ಕಂದಾಯ ಬಾಕಿ ಅಲ್ಲದ ಇತರ ಬಾಕೀ ಬಗ್ಗೆ ಹರಾಜು ಮಾಡುವ ಜವಿನುಗಳ ಮೇಲೆ ಖಾತೇದಾರನಿಗೆ ಇರುವ ಹಕ್ಕು ಬಾಧ್ಯತೆ ಮಾತ್ರ ಹರಾಜು ಮಾಡಲ್ಪಡುತ್ತೆ.

ತಾಲ್ಲೂಕು.	ಹೋಬಳಿ.	ಗ್ರಾಮ.	ಖಾತೇದಾರರ ಹೆಸರು.	ಸ್ವತ್ತಿನ ತಪ್ಪೀಲ್ ಮತ್ತು ವಿವರ. ಕಟ್ಟಡಗಳು. ಕಟ್ಟಡದ ಹೆಸರು ಅಂದಾಜು ಕಿಮ್ಮತ್ತು.	ಜವಿನು. ನಂಬರ್ ಅಥವಾ ಜವಿನಿನ ಹೆಸರು.	ಖುಷ್ಕಿ ತರಿ ಅಥವಾ ಬಾಗಾಯತು.	ವಿಸ್ತೀರ್ಣ ಎ. ಗು.	ಆಕಾರ ರೂ. ಆ.	ಅಂದಾಜು ಕಿಮ್ಮತ್ತು ರೂ.	ಸರ್ಕಾರಕ್ಕೆ ಸಲೀಯಾನಾ ಕೊಡಬೇಕಾದ ಜೋಡೀ ಯಂ ಗುಣ್ಣಾ ಪೊಬಲಿಗೆ. ರೂ. ಆ.	ಸರ್ಕಾರಕ್ಕೆ ಬರಬೇಕಾದ ನೋಟೀಸ್ ಫೀ ವಗೈರ ಸಹಿತವಾದ ಬಾಕಿ ಪೊಬಲಿಗೆ.
				ಸರ್ಕಾರಿ.							ರೂ. ಆ. ಪೈ.
ಚನ್ನಗಿರಿ	ಸಂಕ ಚಿನ್ನೇರು	ಸೂಳೆಕೆರೆ	ನೆಲ್ಲಿ ಕಾಮಯ್ಯಂಗಾರ್ರವರು		126-3	ತರಿ ...	3 3	14 4	80		3,739 11 5
					103	ಡಿಟೋ	10 0	54 0	300		0 8 0 ನೋಟೀಸ್ ಫೀ
					56-1	ಡಿಟೋ	5 9	20 12	50		0 8 0 ಇಸ್ತಿಹಾರ್ ಫೀ
					56-2	ಡಿಟೋ	2 14	9 8	25		
					56-3	ಡಿಟೋ	3 26	14 12	35		3,740 11 5
						ಖುಷ್ಕಿ.	0 12	....	....		
					194	ತರಿ ...	2 9	9 8	25		249 4 3 ಜವಿನು ಕಂದಾಯ.
					156	ಖುಷ್ಕಿ.	0 17	0 8	130		
						ತರಿ ...	4 23	23 8			1,090 7 2 ಕಾವಲ ತೆರಿಗೆ.
					17	ಖುಷ್ಕಿ.	11 21	3 8	25		2,400 0 0 ಅಡ್ವಾನ್ಸು.
					197	ಡಿಟೋ	11 1	3 0	20		
					18	ಡಿಟೋ	11 21	4 0	30		3,739 11 5
					86	ತರಿ ...	9 29	46 0	350		
					14	ಖುಷ್ಕಿ.	12 16	4 8	60		
					201	ಡಿಟೋ	1 11	0 12	2		
						ತರಿ ...	1 36	9 4	10		
					168	ಖುಷ್ಕಿ.	10 38	5 0	30		
					ಇನಾಂ 51	ಡಿಟೋ	0 18	0 4	40	4 4	
						ತರಿ ...	4 22	21 12			
					96	ಡಿಟೋ	7 6	34 0	15	3 4	
					89	ಡಿಟೋ	8 34	45 0	100	15 0	
							123 6	323 12	1,492	22 8	

ಎ. ವೇದಾಂತದೇಸಿಗಂ ಐಯ್ಯಂಗಾರ್,
ಫಾರ್ ಡೆಪ್ಯುಟಿ ಕಮಿಷನರ್.

ಹಡೂರು ಡಿಸ್ಟ್ರಿಕ್ಟ್.

ಸ್ಥಿರಸ್ವತ್ತಿನ ಹರಾಜ್ ಬಗ್ಗೆ ಕೊಡಲ್ಪಟ್ಟ ಇಸ್ತಿಹಾರ್ ವ ಪ್ರಸಿದ್ಧ ಪತ್ರಿಕೆ.

1. ಕಂದಾಯದ ಬಾಕೀದಾರರಾದ ಜೋಡೀ ಲಕ್ಷ್ಮೀಸಾಗರದ ದೊಡ್ಡದೇವೀರಪ್ಪನವರಿಂದ ಬರಬೇಕಾದ ಜವಿನು ಕಂದಾಯದ ಬಾಕೀಗಾಗಿ ಇದರಡಿ ನಮೂದಾಗುವ ಸ್ಥಿರಸ್ವತ್ತು ಹಡೂರು ಡಿಸ್ಟ್ರಿಕ್ಟ್ ತರೀಕೆರೆ ತಾಲ್ಲೂಕು ಆಫೀಸಿನಲ್ಲಿ 1907ನೆ ಇಸವಿ ಅಕ್ಟೋಬರ್ 2ನೆ ತಾರೀಖಿನಲ್ಲಿ ಬಹಿರಂಗವಾದ ಹರಾಜು ಮಾಡಲ್ಪಡುತ್ತೆಂದು ಇದರಿಂದ ಪ್ರಸಿದ್ಧಪಡಿಸಲ್ಪಟ್ಟು ಇದೆ.

ಹರಾಜು ದಿವಿ 11 ಘಂಟೆಗೆ ಉಪಕ್ರಮಿಸಲ್ಪಡುತ್ತೆ. ಸ್ವತ್ತು ವಿಕ್ರಯ ಚಡದರಖಾಸ್ತುದಾರನ ಹೆಸರಿಗೆ ನಿಲ್ಲಿಸಲ್ಪಡುವುದು.

2. ಸದರೀ ಸ್ವತ್ತಿಗಾಗಿ ಹರಾಜುದಾರನು 1906—07ನೆ ಸಾಲಿಗೆ ಪೂರ್ತಿಯಾಗಿ ಪಾವತಿ ಮಾಡಬೇಕಾದ ಪೊಬಲಗು ಇದರಡಿ ಕಾಣಿಸಿರುವ ತಪ್ಪೀಲ್‌ನಲ್ಲಿ ನಮೂದಿಸಿರುವ ತಪಸೀಲ್ ಮೇರಿಗೆ ರೂಪಾಯಿ 82—11—10

3. ಹರಾಜು ಕಾಲದಲ್ಲಿ ಹರಾಜ್‌ದಾರನು ಹರಾಜ್ ಪೊಬಲಿಗೆ ಕೇಕಡಾ 25 ರೂಪಾಯಿಗಳನ್ನು ಡಿಪಾಜಿಟ್ಟು ಮಾಡಬೇಕಾಗಿರುತ್ತೆ. ಅದು ಜಾತಾ ಹರಾಜು ಬಾಬತು ಬಾಕೀ ಪೊಬಲಗು ಹರಾಜ್ ತಾರೀಖು ಲಾಗಾಯ್ತು 15 ದಿವಸಗಳೊಳಗೆ ಪಾವತಿ ಮಾಡಲ್ಪಡದೇ ಹೋದಲ್ಲಿ ಮೇಲೆ ಹೇಳಿದ ಡಿಪಾಜಿಟ್ಟು ಪೊಬಲಗನ್ನು ಹಾಜರ್ಮಾಡಿದವನು ಕಳ್ಕೊಳ್ಳಲು ಗುರಿಯಾಗುತ್ತಾನೆ.